Akashvani : Bengaluru
National Bulletin In Kannada
08.09.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

08.09.2025 : 1310hrs

*******

**ಮುಖ್ಯಾಂಶಗಳು :**

1. ಭಾರತವನ್ನು ಪುನಃ ಜಾಗತಿಕ ವ್ಯಾಪಾರ ಮತ್ತು ಜ್ಞಾನ ಕೇಂದ್ರವನ್ನಾಗಿ ಮಾಡುವಂತೆ ನಾಗರಿಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ
2. ಜಿಎಸ್‌ಟಿ ದರ ಕಡಿತವನ್ನು ಗ್ರಾಹಕರಿಗೆ ತಲುಪಿಸುವಂತೆ ಬಿಜೆಪಿ ಸಂಸದೀಯ ಪಕ್ಷ ತಯಾರಕರು, ವ್ಯಾಪಾರಿಗಳಿಗೆ ಮನವಿ
3. ಯುವಕರಲ್ಲಿ ಉದ್ಯೋಗಾವಕಾಶ, ಕೌಶಲ್ಯಾಭಿವೃದ್ಧಿ ಉತ್ತೇಜನಕ್ಕೆ ಖಾಸಗಿ ಕಂಪನಿಯೊಂದಿಗೆ ಕೇಂದ್ರ ಕಾರ್ಮಿಕ ಸಚಿವಾಲಯ ಒಪ್ಪಂದ
4. ಭಯೋತ್ಪಾದನಾ ಸಂಚು ತನಿಖೆ ಭಾಗವಾಗಿ ಎನ್‌ಐಎ ಯಿಂದ ದೇಶದ ೨೨ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ
5. ಫಿಡೆ ಗ್ರ್ಯಾಂಡ್ ಸ್ವಿಜ್ ಚೆಸ್ ಪಂದ್ಯಾವಳಿ ; ಮುಕ್ತ ವಿಭಾಗದಲ್ಲಿ ಭಾರತದ ದಿವ್ಯಾ ದೇಶ್‌ಮುಖ್‌ಗೆ ಮೊದಲ ಗೆಲುವು

**********

ಭಾರತವನ್ನು ಪುನಃ ಜಾಗತಿಕ ವ್ಯಾಪಾರ ಮತ್ತು ಜ್ಞಾನ ಕೇಂದ್ರವನ್ನಾಗಿ ಮಾಡುವಂತೆ ಸಮಸ್ತ ನಾಗರಿಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ನವದೆಹಲಿಯಲ್ಲಿ ನಡೆದ ಇಂಜಿನಿಯರಿಂಗ್ ರಫ್ತು ಉತ್ತೇಜನ ಸಮಿತಿ ಇಇಪಿಸಿಯ ೭೦ನೇ ವಾರ್ಷಿಕೋತ್ಸವದ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ಭಾರತೀಯ ಆರ್ಥಿಕತೆ ಹೆಚ್ಚು ಸ್ವಾವಲಂಬಿ ಮತ್ತು ರಫ್ತಿನಲ್ಲಿ ಯಶಸ್ಸು ಸಾಧಿಸುವ ಅಗತ್ಯವಿದೆ ಎಂದರು. ಕೋವಿಡ್ ಸಂದರ್ಭದಲ್ಲಿ ಆತ್ಮ ನಿರ್ಭರ ಭಾರತಕ್ಕಾಗಿ ಹಾಕಿದ ಅಡಿಪಾಯ ನಿರಂತರವಾಗಿ ಫಲ ನೀಡುತ್ತಿದೆ. ಜಾಗತಿಕ

ಅಸ್ಥಿರತೆಯಿಂದ ರಾಷ್ಟ್ರೀಯ ಆರ್ಥಿಕತೆಯ ಮೇಲೆ ಕನಿಷ್ಠ ಪ್ರಭಾವವಾಗುವ ವಲಯ, ಆತ್ಮ ನಿರ್ಭರ ಭಾರತದ ಪ್ರಮುಖ ಆಯಾಮವಾಗಿರಬೇಕು ಎಂದು ಹೇಳಿದ್ದಾರೆ. ಈ ಇಇಪಿಸಿಯ ೧೦ ಸಾವಿರ ಸದಸ್ಯರಲ್ಲಿ ಶೇಕಡ ೬೦ರಷ್ಟು ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸದಸ್ಯತ್ವ ಹೊಂದಿವೆ. ಇವು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತಿವೆ. ಭಾರತದ ಆರ್ಥಿಕತೆಯಲ್ಲಿ ಎಂಎಸ್ಎಂಇಗಳ ಪಾತ್ರ ಮಹತ್ವದ್ದಾಗಿದೆ ಎಂದರು.

**********

ಜಿಎಸ್‌ಟಿ ದರ ಕಡಿತವನ್ನು ಗ್ರಾಹಕರಿಗೆ ತಲುಪಿಸುವಂತೆ ಬಿಜೆಪಿ ಸಂಸದೀಯ ಪಕ್ಷ ತಯಾರಕರು ಹಾಗೂ ವ್ಯಾಪಾರಿಗಳಿಗೆ ಕರೆ ನೀಡಿದೆ. ಜಿಎಸ್‌ಟಿಯ ನೂತನ ಸುಧಾರಣೆಗಳು ಉತ್ಪಾದನೆಯನ್ನು ಉತ್ತೇಜಿಸಿ ಬಳಕೆಯನ್ನು ಪ್ರೋತ್ಸಾಹಿಸುತ್ತವೆ. ನವದೆಹಲಿಯಲ್ಲಿ ನಡೆಯುತ್ತಿರುವ ಕಾರ್ಯಾಗಾರದಲ್ಲಿ ಬಿಜೆಪಿ ಸಂಸದೀಯ ಪಕ್ಷ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳ ಕುರಿತ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿತು. ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಮಂಡಿಸಿದ ನಿರ್ಣಯದ ಕುರಿತು ಬಿಜೆಪಿ ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಈ ದಿಟ್ಟ ಮತ್ತು ನಾಗರಿಕ ಸ್ನೇಹಿ ಚಿಂತನೆಯ ಕ್ರಮಕ್ಕಾಗಿ ಅಭಿನಂದಿಸಿದರು. ಬಿಜೆಪಿ ಸಂಸದರ ತರಬೇತಿ ಶಿಬಿರದ ಸಮಾರೋಪ ಅಧಿವೇಶನದಲ್ಲಿ ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣ ಮಾಡಲಿದ್ದಾರೆ. ಸಂಸತ್ ಸಂಕೀರ್ಣದ ಬಾಲಯೋಗಿ ಸಭಾಂಗಣದಲ್ಲಿ ಈ ಎರಡು ದಿನಗಳ ಕಾರ್ಯಾಗಾರ ನಿನ್ನೆ ಆರಂಭವಾಗಿದ್ದು, ಇಂದು ಅಂತ್ಯಗೊಳ್ಳಲಿದೆ. ಈ ಶಿಬಿರವನ್ನು ಉಪರಾಷ್ಟ್ರಪತಿಗಳ ಚುನಾವಣೆಯ ಮತದಾನ ಪ್ರಕ್ರಿಯೆ ಸೇರಿದಂತೆ ಸಂಸದರಿಗೆ ತಾಂತ್ರಿಕ ಮತ್ತು ಮೌಲಿಕ ತರಬೇತಿ ನೀಡುವ ಉದ್ದೇಶದಿಂದ ಆಯೋಜಿಸಲಾಗಿದೆ. ಉಪರಾಷ್ಟ್ರಪತಿಗಳ ಚುನಾವಣೆ ನಾಳೆ ನಡೆಯಲಿದೆ. ಈ ಶಿಬಿರದಲ್ಲಿ ಬಿಜೆಪಿ ಸಂಸದರು ಹಾಗೂ ಹಿರಿಯ ನಾಯಕರು ಭಾಗವಹಿಸಿದ್ದಾರೆ. ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯುತ್ತಿದ್ದು, ಪರಸ್ಪರ ಅನುಭವ ಹಂಚಿಕೊಳ್ಳಲಾಗುತ್ತಿದೆ.

**********

ಯುವಕರಲ್ಲಿ ಉದ್ಯೋಗಾವಕಾಶ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸಲು ನವದೆಹಲಿಯಲ್ಲಿಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಖಾಸಗಿ ಕಂಪನಿಯೊಂದಿಗೆ ತಿಳಿವಳಿಕಾ ಒಪ್ಪಂದಕ್ಕೆ ಸಹಿ ಹಾಕಿದೆ. ಕೇಂದ್ರ ಸಚಿವ ಮನ್ಸುಖ್ ಮಾಂಡವೀಯಾ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಮನ್ಸುಖ್ ಮಾಂಡವೀಯಾ, ಉದ್ಯೋಗ ಸೃಜನೆ ಮತ್ತು ಉದ್ಯೋಗಾವಕಾಶ ಬಲಿಷ್ಠ ಮತ್ತು ಸ್ವಾವಲಂಬಿ ಭಾರತದ ಆಧಾರಸ್ತಂಭವಾಗಿದೆ. ಖಾಸಗಿ ವೇದಿಕೆಗಳೊಂದಿಗಿನ ಸಹಯೋಗ ಉದ್ಯೋಗವಕಾಶದ ವ್ಯಾಪ್ತಿಯನ್ನು ಹೆಚ್ಚಿಸಲಿದ್ದು, ಕೃಷಿ, ಸೇವೆ ಮತ್ತು ಮೂಲಸೌಕರ್ಯದಂತಹ ನಿರ್ಣಾಯಕ ಕ್ಷೇತ್ರಗಳ ಅಭಿವೃದ್ಧಿಗೆ ಕಾರಣವಾಗಿ ದೇಶದ ಆರ್ಥಿಕತೆಯನ್ನು ಬಲಪಡಿಸಲಿದೆ ಎಂದು ಹೇಳಿದರು. ಇದೇ ದಿಕ್ಕಿನಲ್ಲಿ ರಾಷ್ಟ್ರೀಯ ವೃತ್ತಿ ಸೇವಾ ಪೋರ್ಟಲ್ ಪ್ರಮುಖ ಪಾತ್ರ ವಹಿಸುತ್ತಿದ್ದು, ಈವರೆಗೆ ೫೧ ಲಕ್ಷ ನೋಂದಣಿಗಳು, ೮೦ ಸಾವಿರ ಅಂತಾರಾಷ್ಟ್ರೀಯ ಉದ್ಯೋಗ ಸೇರಿದಂತೆ ಒಟ್ಟು ೪೬ ಲಕ್ಷ ಉದ್ಯೋಗಗಳಿಗೆ ಪ್ರವೇಶ ನೀಡಿದೆ ಎಂದು ಸಚಿವರು ಮಾಹಿತಿ ನೀಡಿದರು.

**********

ಭಯೋತ್ಪಾದಕ ಸಂಚು ಪ್ರಕರಣದ ತನಿಖೆಯ ಭಾಗವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ - ಎನ್ಐಎ ಇಂದು ದೇಶದ ಐದು ರಾಜ್ಯಗಳು ಹಾಗೂ ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಒಟ್ಟು ೨೨ ಸ್ಥಳಗಳಲ್ಲಿ ಬೃಹತ್ ಶೋಧ ಕಾರ್ಯಾಚರಣೆ ನಡೆಸಿದೆ. ಅಧಿಕಾರಿಗಳ ಪ್ರಕಾರ ಬಿಹಾರದಲ್ಲಿ ೮, ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ತಲಾ ೧, ಉತ್ತರಪ್ರದೇಶದಲ್ಲಿ ೨, ಜಮ್ಮು-ಕಾಶ್ಮೀರ್ ೯ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಈ ಕಾರ್ಯಾಚರಣೆಗಳು ಭಯೋತ್ಪಾದನಾ ಸಂಘಟನೆಗಳ ಮೂಲ ಸೌಕರ್ಯ ಮತ್ತು ಸಂಪರ್ಕ ಜಾಲಗಳನ್ನು ನಾಶಗೊಳಿಸಲು ಉದ್ದೇಶಿತವಾಗಿವೆ. ಎನ್ಐಎ ಭಯೋತ್ಪಾದಕರನ್ನು ಪತ್ತೆ ಹಚ್ಚುವುದು ಹಣದ ಮೂಲಗಳ ಪತ್ತೆ ಮತ್ತು ಸಾಕ್ಷ್ಯ ಸಂಗ್ರಹಿಸಲು ತನ್ನ ಕಾರ್ಯಾಚರಣೆ ಮುಂದುವರಿಸಿದೆ.

**********

ಕರ್ನಾಟಕದ ಮಂಡ್ಯ ಜಿಲ್ಲೆಯ ಮದ್ದೂರು ನಗರದಲ್ಲಿ ಕಳೆದ ರಾತ್ರಿ ಗಣೇಶಮೂರ್ತಿ ವಿಸರ್ಜನೆ ಸಂಭವಿಸಿದ ಕಲ್ಲು ತೂರಾಟ ಹಾಗೂ ಗುಂಪು ಘರ್ಷಣೆಗೆ ಸಂಬಂಧಪಟ್ಟಂತೆ ೨೧ ಮಂದಿಯನ್ನು ಬಂಧಿಸಲಾಗಿದೆ. ಇನ್ನಷ್ಟು ಮಂದಿಯನ್ನು ವಶಕ್ಕೆ ಪಡೆಯಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿದ್ದಾರೆ. ಮದ್ದೂರು ನಗರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಘಟನೆಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ. ಮುಂಜಾಗೃತಾ ಕ್ರಮವಾಗಿ ಇಂದು ಬೆಳಿಗ್ಗೆ ೬ರಿಂದ ರಾತ್ರಿ ೧೨ಗಂಟೆಯವರೆಗೆ ನಗರದಾದ್ಯಂತ ನಿಷೇಧಾಜ್ಞೆ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.

**********

ಬಿಹಾರದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶ ಒದಗಿಸುವ ಗುರಿಯನ್ನು ಹೊಂದಿರುವ ನೂತನ ಯೋಜನೆ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಚಾಲನೆ ನೀಡಿದ್ದಾರೆ. ಈ ಯೋಜನೆಯಡಿ ರಾಜ್ಯದ ಪ್ರತಿ ಕುಟುಂಬದಿಂದ ಒಬ್ಬ ಮಹಿಳೆಗೆ ತನ್ನ ಆಯ್ಕೆಯ ಉದ್ಯಮವನ್ನು ಆರಂಭಿಸಲು ಆರ್ಥಿಕ ನೆರವು ನೀಡಲಾಗುವುದು. ಆರ್ಥಿಕ ನೆರವಿನ ಮೊದಲನೇ ಕಂತಿನ ರೂಪದಲ್ಲಿ, ಆಯ್ಕೆಯಾದ ಪ್ರತಿ ಮಹಿಳೆ ತಲಾ ೧೦ ಸಾವಿರ ರೂಪಾಯಿ ನೇರ ನಗದು ವರ್ಗಾವಣೆ ಮೂಲಕ ಪಡೆಯಲಿದ್ದಾರೆ.

**********

ನವದೆಹಲಿಯಲ್ಲಿಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಐಯೊವಾ ಗವರ್ನರ್ ಕಿಮ್ ರೆನಾಲ್ಡ್ಸ್ ಅವರನ್ನು ಭೇಟಿ ಮಾಡಿದರು. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಡಾ. ಎಸ್. ಜೈಶಂಕರ್, ಭೇಟಿಯ ವೇಳೆ ಭಾರತ-ಅಮೆರಿಕ ನಡುವಿನ ಆರ್ಥಿಕ ಸಂಬಂಧಗಳ ಕುರಿತು ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

**********

ರಷ್ಯಾ-ಉಕ್ರೇನ್ ಸಂಘರ್ಷ ಅತಿ ಶೀಘ್ರದಲ್ಲೇ ಕೊನೆಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರಿಗೆ ಮಾಹಿತಿ ನೀಡಿರುವ ಅವರು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಲಾಗುವುದು. ಐರೋಪ್ಯ

ನಾಯಕರು ಈ ಸಂಘರ್ಷದ ಪರಿಹಾರಕ್ಕೆ ಕಾರ್ಯತಂತ್ರದ ಕುರಿತು ಚರ್ಚಿಸಲು ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ ಎಂದಿದ್ದಾರೆ.

**********

ರಷ್ಯಾ, ಭಾರತ ಮತ್ತು ಚೀನಾ ಹಂಚಿಕೆಯ ಹಿತಾಸಕ್ತಿಯ ವಿಷಯಗಳ ಆಧಾರದ ಮೇಲೆ ತಮ್ಮ ಕಾರ್ಯತಂತ್ರದ ಪಾಲುಗಾರಿಕೆಯನ್ನು ಬಲಪಡಿಸಿಕೊಳ್ಳುತ್ತಿವೆ ಎಂದು ರಷ್ಯಾ ವಿದೇಶಾಂಗ ಸಚಿವ ಸರ್ಗೆಯ್ ಲವ್ರೋವ್ ತಿಳಿಸಿದ್ದಾರೆ. ಜೀವನ ಗುಣಮಟ್ಟ ಸುಧಾರಣೆ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಮತ್ತು ಆರ್ಥಿಕ ಬೆಳವಣಿಗೆಯ ಸಾಮಾನ್ಯ ಗುರಿಗಳನ್ನು ಈ ಮೂರು ರಾಷ್ಟ್ರಗಳು ಹೊಂದಿವೆ ಎಂದು ಹೇಳಿದ್ದಾರೆ. ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಹಸ್ತಲಾಘವದ ಮೂಲಕ ತೋರಿದ ಐಕ್ಯತೆ ಜಾಗತಿಕ ಗಮನವನ್ನು ಸೆಳೆದಿತ್ತು.

**********

ದಕ್ಷಿಣ-ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಗುದ್ದಾರ್ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಒಬ್ಬ ಅಪರಿಚಿತ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಸೇನೆಯ ಕಿರಿಯ ಅಧಿಕಾರಿಯೊಬ್ಬರು ಗಾಯಗೊಂಡಿರುವುದಾಗಿ ಸೇನಾ ವಕ್ತಾರರು ತಿಳಿಸಿದ್ದಾರೆ. ಇದಕ್ಕೂ ಮುನ್ನ ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ ಇಂದು ಬೆಳಗ್ಗೆ ಕುಲ್ಗಾಮ್ ಜಿಲ್ಲೆಯ ಗುದ್ದಾರ್ ಅರಣ್ಯ ಪ್ರದೇಶದಲ್ಲಿ ಭಾರತೀಯ ಸೇನೆ, ಸಿಆರ್‌ಪಿಎಫ್ ಹಾಗೂ ಜಮ್ಮು-ಕಾಶ್ಮೀರ ಪೊಲೀಸರು ಜಂಟಿ ಕಾರ್ಯಾಚರಣೆ ಆರಂಭಿಸಿದರು. ಪಡೆಗಳ ಸಿಬ್ಬಂದಿ ಶಂಕಿತ ಸ್ಥಳವನ್ನು ತಲುಪುತ್ತಿದ್ದಂತೆ ಅಡಗಿದ್ದ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದರು. ಬಳಿಕ ಸೇನಾಪಡೆಗಳು ಹಾಗೂ ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ. ಕಾರ್ಯಾಚರಣೆ ಪ್ರಗತಿಯಲ್ಲಿದೆ.

**********

ಉಜ್ಬೇಕಿಸ್ತಾನದಲ್ಲಿ ನಡೆಯುತ್ತಿರುವ ಫಿಡೆ ಗ್ರ್ಯಾಂಡ್ ಸ್ವಿಜ್ ೨೦೨೫ರ ಚೆಸ್ ಪಂದ್ಯಾವಳಿಯ ಮುಕ್ತ ವಿಭಾಗದಲ್ಲಿ ಭಾರತದ ದಿವ್ಯ ದೇಶ್‌ಮುಖ್ ತಮ್ಮ ಮೊದಲ ಗೆಲುವು ದಾಖಲಿಸಿದ್ದಾರೆ. ನಿನ್ನೆ ರಾತ್ರಿ

ನಡೆದ ಪಂದ್ಯದಲ್ಲಿ ಅವರು, ಈಜಿಪ್ಟ್‌ನ ಬಸ್ಸೆಮ್ ಅಮಿನ್ ಅವರ ವಿರುದ್ಧದ ೪ನೇ ಸುತ್ತಿನ ಪಂದ್ಯದಲ್ಲಿ ಗೆಲುವು ದಾಖಲಿಸಿದರು.

**********

ಮಣಿಪುರದಲ್ಲಿ ನಿನ್ನೆ ನಡೆಸಿದ ಶೋಧ ಕಾರ್ಯಾಚರಣೆಗಳಲ್ಲಿ ಭದ್ರತಾಪಡೆಗಳು ವಿವಿಧ ಪ್ರತ್ಯೇಕತವಾದಿ ಗುಂಪುಗಳ ಆರು ಕೇಡರ್‌ಗಳನ್ನು ಬಂಧಿಸಿವೆ. ಇವುಗಳಲ್ಲಿ ಪಿಎಲ್‌ಎ ಎಂಬ ಸಂಘಟ ೨ ಕೇಡರ್, ಕೆಸಿಟಿ ಮತ್ತು ಯುಎನ್‌ಎಲ್‌ಎಫ್‌ನ ತಲಾ ೧ ಕೇಡರ್ ಅನ್ನು ಭಾರತ ಮ್ಯಾನ್ಮಾರ್ ಅಂತಾರಾಷ್ಟ್ರೀಯ ಗಡಿ ಬಳಿಯಿರುವ ತೆಂಗ್‌ನೌಪಾಲ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಮಣಿಪುರ ಪೊಲೀಸರು ಮಾಹಿತಿ ನೀಡಿದ್ದಾರೆ.

*****END*****